O.S .No. 12/2012
DW-1

ದಿನಾಂಕ: 28.11.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು ವಾದಿ ಪರ ಶ್ರೀ ಬಿ ಎಸ್ ವೈ ವಕೀಲರಿಂದಃ</u>

ನ್ಯಾಯಾಲಯದ ಮುಂದೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಬರೆದಿರುವಂತಹ ವಿಚಾರ ಗೊತ್ತಿಲ್ಲ. ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿಯನ್ನು ಹೊರತುಪಡಿಸಿ ಬೇರೆ ಏನಾದರೂ ದಾಖಲಾತಿ ನಿಮ್ಮ ಬಳಿ ಇದೆಯೇ ಎಂದರೆ ಸಾಕ್ಷಿ ಇದೆ ಎಂದು ಹೇಳುತ್ತಾರೆ. ಇನ್ನೇನೂ ದಾಖಲಾತಿ ನಿಮ್ಮ ಬಳಿ ಇದೆ ಎಂದರೆ ಸಾಕ್ಷಿ ಆರ್ ಟಿ ಸಿ, ಕಂದಾಯದ ಕಾಪಿ ನನ್ನ ತಮ್ಮನ ಬಳಿ ಇದೆ ಎಂದು ಹೇಳುತ್ತಾರೆ. ನಿಮ್ಮ ತಮ್ಮನ ಬಳಿ ಇರುವಂತಹ ದಾಖಲಾತಿಯನ್ನು ತಂದು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ ಸಾಕ್ಷಿ ಹಾಜರುಪಡಿಸುತ್ತೇನೆ ಎಂದು ಹೇಳುತ್ತಾರೆ. ನನ್ನ ಪರ ಯಾರು ಸಾಕ್ಷಿದಾರರು ಇಲ್ಲ. ನಿಡಿ.14 ನ್ನು ಯಾರು, ಎಲ್ಲಿ ಬರೆದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಡಿ.14 ರಲ್ಲಿ ಏನು ಬರೆದಿದೆ ಎಂಬ ವಿಚಾರ ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಗೂ ನಿಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ಅದು ನಮ್ಮದು ಎಂದು ಹೇಳುತ್ತಾರೆ. ದಾವಾ ಆಸ್ತಿ ನಿಮಗೆ ಹೇಗೆ ಬಂತು ಎಂಬುವ ಬಗ್ಗೆ ದಾಖಲಾತಿ ಇದೆಯೇ ಎಂದರೆ ಸಾಕ್ಷಿ ಇದೆ ಎಂದು ಹೇಳುತ್ತಾರೆ. ನಿಮ್ಮ ಬಳಿ ಏನು ದಾಖಲಾತಿ ಇದೆ ಎಂದರೆ ಸಾಕ್ಷಿ ನನ್ನ ಬಳಿ ಪಹಣಿ, ಎಂ ಆರ್ ಪ್ರತಿ ಹಾಗೂ ಕಂದಾಯ ಪಾವತಿ ರಶೀದಿ ಇದೆ ಎಂದು ಹೇಳುತ್ತಾರೆ. ಪಹಣಿ ನಿಮ್ಮ ಹೆಸರಿಗೆ ಹೇಗೆ ಬಂತು ಎಂದರೆ ಸಾಕ್ಷಿ ನಮ್ಮ ಮಾವ, ಅಜ್ಜಿ ಮತ್ತು ಅವರ ತಂದೆ ನನ್ನ ತಾಯಿಗೆ ಬರೆದುಕೊಟ್ಟಿದ್ದು ನನ್ನ ತಾಯಿ ನನಗೆ ಬರೆದುಕೊಟ್ಟಿದ್ದರಿಂದ ನನ್ನ ಹೆಸರಿಗೆ ಬಂದಿರುತ್ತದೆ. ನಿಮ್ಮ ತಾಯಿಗೆ ಮಾವ, ಅಜ್ಜಿ ಮತ್ತು ಅವರ ತಂದೆ ಏನು ದಾಖಲಾತಿ ಬರೆದುಕೊಟ್ಟರು ಎಂದರೆ ಸಾಕ್ಷಿ ನನಗೆ ಸರಿಯಾಗಿ ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ ತಾಯಿಗೆ ಬರೆದುಕೊಟ್ಟ ದಾಖಲಾತಿ ನಿಮ್ಮ ಬಳಿ ಇದೆಯೇ ಎಂದರೆ ಸಾಕ್ಷಿ ಅದು ಸರಿಯಾಗಿ ನನಗೆ ಗೊತ್ತಿಲ್ಲ ಇರಬಹುದು ಎಂದು ಹೇಳುತ್ತಾರೆ. ಪಹಣಿ, ಮ್ಯುಟೇಷನ್ ನಲ್ಲಿ ಯಾವ ದಾಖಲಾತಿ ಮುಖೇನ ಬರೆದುಕೊಟ್ಟರು ಎಂಬ ಬಗ್ಗೆ ನಮೂದು ಇದೆಯೇ ಎಂದರೆ ಸಾಕ್ಷಿ ನನಗೆ ಓದಲು ಬರುವುದಿಲ್ಲ ಎನ್ನುತ್ತಾರೆ.

ನಿಮ್ಮ ತಾಯಿಗೆ ಮಾವ, ಅಜ್ಜಿ ಮತ್ತು ಅವರ ತಂದೆ ಯಾವ ದಾಖಲಾತಿ ಬರೆದುಕೊಟ್ಟಿಲ್ಲ, ಬರೆದುಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮಾವ, ಅಜ್ಜಿ ಮತ್ತು ಅವರ ತಂದೆ ರವರು ದಾಖಲಾತಿ ಬರೆದುಕೊಟ್ಟಿದ್ದರೆ ನಿಡಿ.1 ರಲ್ಲಿ ನಮೂದಿಸುತ್ತಿದ್ದರು ಎಂದರೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಮ್ಮ ತಾಯಿ ಹಾಗೂ ನೀವು ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಖಾತೆ ಮಾಡಿಸಿಕೊಂಡಿದ್ದು ಅದನ್ನು ವಾದಿಗಳು  ಉಪವಿಭಾಗಾಧಿಕಾರಿರವರ ಸಮಕ್ಷಮ ಪ್ರಶ್ನೆ ಮಾಡಿದ್ದು ನಿಮ್ಮ ಖಾತೆಯನ್ನು ವಜಾ ಮಾಡಲಾಗಿದೆ ಎಂದರೆ ಸರಿಯಲ್ಲ. ವಾದಿಗಳು ನಿಮ್ಮಗಾದ ಖಾತೆಯನ್ನು ಪ್ರಶ್ನಿಸಿ ಇದೇ ನ್ಯಾಯಾಲಯದಲ್ಲಿ ಈ ದಾವೆಯಲ್ಲಿ ಪ್ರಶ್ನೆ ಮಾಡಿ ಹೂಡಿರುತ್ತಾರೆ ಎಂದರೆ ನನ್ನ ತಮ್ಮ ದಾವಾ ಆಸ್ತಿಯನ್ನು ಉಳುಮೆ ಮಾಡುತ್ತಿದ್ದು ಯಾರೂ ದಾವೆ ಹೂಡಿದ ಬಗ್ಗೆ ನನಗೆ ತಿಳಿಸಿದ್ದರಿಂದ ನಾನು ಬಂದು ವಕೀಲರನ್ನು ನೇಮಿಸಿಕೊಂಡು ದಾವೆಯನ್ನು ಹೂಡಿರುತ್ತೇನೆ.

ಈ ದಾವೆಯಲ್ಲಿ ನೀವು ವಕೀಲರನ್ನು ನೇಮಕಮಾಡಿಕೊಂಡದು ನಿಮ್ಮ ಪರ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದೆ ಇದುದ್ದರಿಂದ ದಾವೆ ಪುರಸ್ಕರಿಸಲಾಗಿತ್ತು ಎಂದರೆ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ  ಎಂದರೆ  ಸರಿಯಲ್ಲ.

ದಾವೆ ಪುರಸ್ಕೃತಗೊಂಡ ನಂತರ ನೀವು ಬೇರೆಯವರಿಗೆ ದಾವಾ ಆಸ್ತಿಯನ್ನು ಕ್ರಯದ ಕರಾರು ಮಾಡಿ, ಹಣ ಪಡೆದಿರುತ್ತೀರಿ  ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಕ್ರಯದ ಕರಾರಿನಂತೆ ಕ್ರಯಪತ್ರ ಬರೆದುಕೊಡುವಂತೆ ಕೋರಿ ಖರೀದಿದಾರರು ದಾವೆ ಹೂಡಿದ್ದರು ಎಂದರೆ ಸರಿಯಲ್ಲ. ಸಿಂಧು ಎಂಬುವವರು ನಿಮ್ಮ ಬಳಿ ಕ್ರಯದ ಕರಾರನ್ನು ಮಾಡಿಸಿಕೊಂಡಿದ್ದರು ಎಂದರೆ ಇಲ್ಲ ಅವರು ಯಾರು  ಎಂದು ಗೊತ್ತಿಲ್ಲ ಎನ್ನುತ್ತಾರೆ. ಓ ಎಸ್ 65/2018 ರಂತೆ ನಿಮ್ಮ ಹಾಗೂ ವಾದಿಗಳ ವಿರುದ್ಧ ಅಧಿಕ ಹೆಚ್ಚುವರಿ ದಿವಾಣಿ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು ಎಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲೂ ಸಹ ನೀವು ವಕೀಲರನ್ನು ನೇಮಿಸಿಕೊಂಡು ಹಾಜರಾಗಿದ್ದೀರಿ ಎಂದರೆ ಸರಿಯಲ್ಲ. ಸಿಂಧು ಎಂಬುವವರ ಬಳಿ ಸಹ ನಾಲ್ಕು ಲಕ್ಷ ಮೊಬಗಲನ್ನು ಪಡೆದು ಮೋಸ ಮಾಡಿಸಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ಹೆಸರಿನಲ್ಲಿ ಇದೆ. ದಾವಾ ಆಸ್ತಿ ನಿಮ್ಮ ಹೆಸರಿನಲ್ಲಿ ಇರುವ ಬಗ್ಗೆ ದಾಖಾಲಾತಿ ಕೊಟ್ಟಿದ್ದೀರಾ ಎಂದರೆ ಕೊಟ್ಟಿದ್ದೇನೆ ಎನ್ನುತ್ತಾರೆ. ದಾವಾ ಆಸ್ತಿ ನಿಮ್ಮಹೆಸರಿನಲ್ಲಿ ಇರುವ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ

ಸರಿಯಲ್ಲ. ದಾವಾ ಆಸ್ತಿಗೂ ನಿಮಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿ ನಿಮ್ಮ ಹೆಸರಿನಲ್ಲಿಯೂ ಇಲ್ಲ ಹಾಗೂ ನಿಮ್ಮ ಸ್ವಾಧೀನದಲ್ಲೂ ಇಲ್ಲ ಎಂದರೆ ಸಾಕ್ಷಿ ನನ್ನ ತಮ್ಮನೇ ಉಳುಮೆ ಮಾಡುತ್ತಿದ್ದಾನೆ ಎನ್ನುತ್ತಾರೆ. ನಿಮ್ಮ ಪ್ರತಿವಾದ ಪತ್ರದಲ್ಲಿ ದಾವಾ ಆಸ್ತಿಯಲ್ಲಿ ನಿಮ್ಮ ತಮ್ಮ ಉಳುಮೆ ಮಾಡುತ್ತಿರುವ ಬಗ್ಗೆ ಬರೆಸಿದ್ದೀರಾ ಎಂದರೆ ಸಾಕ್ಷಿ ಬರೆಸಿದ್ದೇನೆ ಎಂದು ಹೇಳುತ್ತಾರೆ.

ದಾವಾ ಆಸ್ತಿಯ ಚಕ್ಕುಬಂದಿ ಗೊತ್ತಾ ಎಂದರೆ ಸಾಕ್ಷಿ ಗೊತ್ತು ಎನ್ನುತ್ತಾರೆ. ದಾವಾ ಆಸ್ತಿಯ ದಕ್ಷಿಣಕ್ಕೆ: ಕೆಂಗೇಗೌಡರ ಜಮೀನು, ಉತ್ತರಕ್ಕೆ: ಕುಳ್ಳೇಗೌಡರ ಜಮೀನು, ಪಶ್ಚಿಮಕ್ಕೆ: ರಸ್ತೆ, ಪೂರ್ವಕ್ಕೆ: ಗೊತ್ತಿಲ್ಲ. ನಿಮಗೆ ದಾವಾ ಆಸ್ತಿಯ ಚಕ್ಕುಬಂದಿ ಗೊತ್ತಿಲ್ಲ ಹಾಗೂ ದಾವಾ ಆಸ್ತಿ ಎಲ್ಲಿ ಇದೆ ಎಂಬ ವಿಚಾರವೂ ಗೊತ್ತಿಲ್ಲ, ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ದಾವಾ ಆಸ್ತಿ ಎಲ್ಲಿ ಇದೆ ಎಂಬ ವಿಚಾರ ಗೊತ್ತಿದ್ದರೆ ನಿಖರವಾಗಿ ಹೇಳುತ್ತಿದ್ದೀರಿ, ನಿಮಗೆ ಗೊತ್ತಿಲ್ಲದೆ ಇರುವುದರಿಂದ ನಿಮಗೆ ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಯಾವ ಯಾವ ವರ್ಷ ಏನೇನೂ ಬೆಳೆ ಬೆಳೆದಿರುತ್ತೀರಿ ಎಂದರೆ ಸಾಕ್ಷಿ ವರ್ಷಕೊಮ್ಮೆ ರಾಗಿ ಬೆಳೆಯುತ್ತೇವೆ, ಕಾಳು ಕಡ್ಡಿ ಬೆಳೆಯುತ್ತೇವೆ ಎನ್ನುತ್ತಾರೆ. ಬೆಳೆ ಬೆಳೆದಂತಹ ರಾಗಿಯನ್ನು ಎ ಪಿ ಎಂ ಸಿ ಗೆ ಮಾರಾಟ ಮಾಡುತ್ತೀರಿ ಎಂದರೆ ಸಾಕ್ಷಿ ಇಲ್ಲ ನಾವೇ ಇಟ್ಟುಕೊಳ್ಳುತ್ತೇವೆ ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ ಯಾವ ಯಾವ ವರ್ಷ ಏನೇನೂ ಬೆಳೆ ಬೆಳೆದೀರಿ ಎಂದು ತೋರಿಸಲು ದಾಖಲಾತಿ ಇದೆಯೇ ಎಂದರೆ ಇಲ್ಲ ಎಂದು ಹೇಳುತ್ತಾರೆ.

ರೈತರಿಗೆ ಕೇಂದ್ರ ಸರ್ಕಾರದಿಂದ ಪ್ರತಿವರ್ಷಕ್ಕೆ 6 ಸಾವಿರ, ಹಾಗೂ ರಾಜ್ಯ ಸರ್ಕಾರದಿಂದ ಪ್ರತಿವರ್ಷಕ್ಕೆ 4 ಸಾವಿರ ಕೃಷಿ ಸಮ್ಮಾನ ಯೋಜನೆಯಡಿ ನೀಡಲಾಗುತ್ತದೆ ಎಂದರೆ ಸರಿ. ಸದರಿ ಯೋಜನೆಯಡಿ ನೀವೇನಾದರೂ ಫಲಾನುಭವಿಯಾಗಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಜಮೀನಿನ ಮಾಲೀಕರಿಗೆ ಅಥವಾ ಖಾತೆದಾರರಿಗೆ ಸದರಿ ಹಣವನ್ನು ನೀಡಲಾಗುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಮಾಲೀಕರು ಆಗಿಲ್ಲದೇ ಇರುವುದರಿಂದ ನಿಮಗೆ ಸರ್ಕಾರದಿಂದ ಯಾವುದೇ ಸವಲತ್ತುಗಳನ್ನು ನೀಡಿಲ್ಲ ಎಂದರೆ ಸಾಕ್ಷಿ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಸವಲತ್ತು ತೆಗೆದುಕೊಂಡ ಬಗ್ಗೆ ದಾಖಲಾತಿ ಇದೆಯೇ ಎಂದರೆ ಸಾಕ್ಷಿ ನಾನು ತೆಗೆದುಕೊಂಡಿಲ್ಲ ಎನ್ನುತ್ತಾರೆ.

ದಾವೆಗೆ, ದಾವಾ ಆಸ್ತಿಗೆ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಡಿ.1 ರಿಂದ 10 ಮತ್ತು 14 ದಾಖಲಾತಿಗಳನ್ನು ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸೃಷ್ಟಿತ್ತ ದಾಖಲಾತಿ ಎಂದರೆ ಸರಿಯಲ್ಲ. ನಿಡಿ.11 ರಿಂದ 13 ರಂತೆ ಸಿಂಧು ಎಂಬುವವರಿಂದ ನಾಲ್ಕು ಲಕ್ಷ ಹಣ ಪಡೆದು ಕ್ರಯದ ಕರಾರು ಪತ್ರ ಮಾಡಿಕೊಟ್ಟು ಮೋಸ ಮಾಡಿರುತ್ತೀರಿ ಎಂದರೆ ಸಾಕ್ಷಿ ಸಿಂಧು ಎಂಬುವವರು ಯಾರು ಎಂಬುದು ಗೊತ್ತಿಲ್ಲ ಎಂದು ಹೇಳುತ್ತಾರೆ. ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿ ದಾವೆಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ.

ವಾದಿಗಳು ಲೇಟ್ ಕೃಷ್ಣೇಗೌಡರ ವಾರಸುದಾರರು ಎಂದರೆ ಸರಿ. ನನ್ನ ತಾಯಿಯ ಹೆಸರು ಪುಟ್ಟಮ್ಮ ಅವರಿಗೆ ಐದು ಜನ ಮಕ್ಕಳು.

ಮರು ವಿಚಾರಣೆ - ಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.